**ಡಾ. ಶೇಖರ್. ಆರ್**

ಸಹ ಪ್ರಾಧ್ಯಾಪಕರು, ಗಣಕ ವಿಜ್ಞಾನ ಹಾಗೂ ಇಂಜಿನಿಯರಿಂಗ್ ವಿಭಾಗ,

ಅಲಯನ್ಸ್ ವಿಶ್ವವಿದ್ಯಾಲಯ, ಆನೇಕಲ್

ಬೆಂಗಳೂರು 562 106

# ಆನ್ ಲೈನ್ ಶಿಕ್ಷಣದ ಮಹತ್ವ

## ಪೀಠಿಕೆ

ಹೆಮ್ಮಾರಿ ಕೊರೋನಾದ ಸಂಕಷ್ಟದಿಂದ ವಿಶ್ವಕ್ಕೇ ಸ್ಮಶಾನ ಮೌನ ಆವರಿಸಿದೆ. ಈ ಸೆಳೆತಕ್ಕೆ ಹಲವಾರು ಸಮಸ್ಯೆಗಳು ಉದ್ಭವಗೊಂಡಿವೆ. ಅದರಲ್ಲಿ ಶಿಕ್ಷಣದ ಸಮಸ್ಯೆಯೂ ಒಂದು. ಅಂದರೆ ಶಾಲಾ – ಕಾಲೇಜುಗಳನ್ನು ತೆರೆದು ಅಲ್ಲಿ ಶಿಕ್ಷಣವನ್ನು ನೀಡಿದರೆ ಅದೆಷ್ಟೋ ವಿದ್ಯಾರ್ಥಿಗಳಿಗೆ ಈ ವೈರಾಣು ಹಬ್ಬಬಹುದು ಎಂಬ ಭಯ ಮೂಡಿದೆ. ಆದ್ದರಿಂದ ಇದಕ್ಕೆ ಕಂಡುಕೊಂಡ ಪರ್ಯಾಯ ವ್ಯವಸ್ಥೆ ಎಂದರೆ ಈ ಆನ್ ಲೈನ್ ಶಿಕ್ಷಣ. ಈ ಸಂದಿಗ್ದ ಪರಿಸ್ಥಿತಿಯಲ್ಲಿ ಆನ್ ಲೈನ್ ಶಿಕ್ಷಣವೇ ಅತಿ ಮುಖ್ಯ ಎಂಬುದನ್ನು ನಾವು ಮನಗಾಣಬೇಕು.

## ವಿಷಯ ಬೆಳವಣಿಗೆ

"ಪ್ರತ್ಯಕ್ಷವಾಗಿ ಶಾಲಾ-ಕಾಲೇಜಿನಲ್ಲಿ ಶಿಕ್ಷಣ ನೀಡಲು ಅಸಾಧ್ಯವಾದಾಗ, ಅದರ ಪರ್ಯಾಯವಾಗಿ ಅಂತರ್ಜಾಲದ ಮುಖೇನ ಶಿಕ್ಷಣ ನೀಡುವ ಪದ್ಧತಿಯೇ ಆನ್ ಲೈನ್ ಶಿಕ್ಷಣ". ಲಾಕ್ ಡೌನ್ ವೇಳೆ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಇರುವ ಒಂದೇ ಆಯ್ಕೆ ಎಂದರೆ ಆನ್ ಲೈನ್ ಬೋಧನೆ.

ಆನ್ ಲೈನ್ ತರಗತಿಗಳ ಮೂಲಕ ಅಂತರ್ಜಾಲ ಆಧರಿತ ಶಿಕ್ಷಣಕ್ಕೆ ಎಲ್ಲ ಶಾಲಾ- ಕಾಲೇಜುಗಳು ಮತ್ತು ಶಿಕ್ಷಣ ಸಂಸ್ಥೆಗಳು ತೆರೆದುಕೊಳ್ಳುತ್ತಿವೆ. ಇದರಿಂದಾಗಿ ಆನ್ ಲೈನ್ ಶಿಕ್ಷಣ ಭವಿಷ್ಯದ ಶಿಕ್ಷಣದ ವಿಧಾನವಾಗುವುದು ಮತ್ತಷ್ಟು ದೃಢವಾಗುತ್ತಿದೆ. ಕರ್ನಾಟಕ ಸರ್ಕಾರವು ಆನ್ ಲೈನ್ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿದೆ. ಈ ಸಂಬಂಧ " ದೀಕ್ಷಾ" ಪೋರ್ಟಲ್ ಅಭಿವೃದ್ಧಿಪಡಿಸಿದ್ದು, ಸುಮಾರು 25 ಲಕ್ಷ ವಿಷಯಗಳನ್ನು ಸಿದ್ಧಪಡಿಸಿ ಪೋರ್ಟಲ್ ನಲ್ಲಿ ನೀಡಲಾಗಿದೆ.

ಪ್ರತಿಯೊಬ್ಬ ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ ಸಂಗ್ರಹಿಸಿ, ಸಂದೇಶಗಳನ್ನು ಕಳುಹಿಸುವ ಮೂಲಕ, ಯೂಟ್ಯೂಬ್ ಚಾನೆಲ್ ಹಾಗೂ ವಾಟ್ಸಾಪ್ ಗ್ರೂಪ್ ಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗುತ್ತಿದೆ. ವಿದೇಶಗಳಲ್ಲಿರುವಂತೆ ತಂತ್ರಜ್ಞಾನ ಆಧಾರಿತ ಪರಿಣಾಮಕಾರಿ ಶಿಕ್ಷಣ ನೀಡುವ ಪ್ರಯತ್ನವನ್ನು ಇಲಾಖೆ ನಡೆಸುತ್ತಿದೆ.

### ಆನ್ ಲೈನ್ ಶಿಕ್ಷಣದ ಅನುಕೂಲತೆಗಳು

- ಪುಸ್ತಕಗಳನ್ನು ಓದಿ, ಅಭ್ಯಸಿಸುವುದಕ್ಕಿಂತ ಆನ್ಲೈನ್ ಮೂಲಕ ಮಾಹಿತಿ ಪಡೆಯುವುದು ಆಧುನಿಕ ಪೀಳಿಗೆಯವರಿಗೆ ಇಷ್ಟವಾಗುತ್ತದೆ.
- ಸಾಮಾನ್ಯವಾಗಿ ನಾವು ಹೊಂದಿರುವ ಮೊಬೈಲ್, ಕಂಪ್ಯೂಟರ್‌ನಂತಹ ಸಾಧನಗಳಿಗೆ ಇಂಟರ್ನೆಟ್ ಸಂಪರ್ಕ ಪಡೆದುಕೊಂಡು ಕಡಿಮೆ ವೆಚ್ಚದಲ್ಲಿ ಶಿಕ್ಷಣ ಪಡೆಯಬಹುದು.
- ಮನೆಯಲ್ಲೇ ಕಲಿಯಬಹುದಾದ್ದರಿಂದ ಸಂಚಾರದ ಅವಶ್ಯಕತೆ ಇರುವುದಿಲ್ಲ. ಇದರಿಂದ ಸಮಯ ಹಾಗೂ ಹಣದ ಉಳಿತಾಯ ಸಾಧ್ಯ.
- ವಿದ್ಯಾರ್ಥಿಯ ಸ್ವಯಂ ಕಲಿಕೆ ಮತ್ತು ಪುನರ್ಮನನಕ್ಕೆ ಹೆಚ್ಚು ಅವಕಾಶ ದೊರೆಯುತ್ತದೆ.

### ಆನ್ ಲೈನ್ ಶಿಕ್ಷಣದ ಅನನುಕೂಲತೆಗಳು

- ನೆಟ್ ವರ್ಕ್ ಸಮಸ್ಯೆಯಿಂದ ಗ್ರಾಮೀಣ ಪ್ರದೇಶದ ಜನರು ಅಂತರ್ಜಾಲ ಸೌಲಭ್ಯವಿಲ್ಲದೆ ಆನ್ ಲೈನ್ ಶಿಕ್ಷಣದಿಂದ ವಂಚಿತರಾಗಬಹುದು.
- ಹೆಚ್ಚಿನ ವಿದ್ಯಾರ್ಥಿಗಳು ಕಂಪ್ಯೂಟರ್, ಲ್ಯಾಪ್ ಟಾಪ್, ಮೊಬೈಲ್ ನಂತಹ ಸಾಧನಗಳನ್ನು ಹೊಂದಿಲ್ಲದಿರುವುದರಿಂದ ಹಾಗೂ ಕಲಿಕೆಗೆ ಅಗತ್ಯವಿರುವ ಅಪ್ಲಿಕೇಶನ್ ಬಳಕೆ ಸಾಧ್ಯವಾಗದಿರುವುದರಿಂದ ಕಲಿಕೆ ಸಮರ್ಪಕವಾಗಿ ಆಗುವುದಿಲ್ಲ.
- ವಿದ್ಯಾರ್ಥಿಗಳು ತಾವೇ ಕಲಿತು ಅಸೈನ್ ಮೆಂಟ್ ಗಳನ್ನು ಮಾಡುವ ಬದಲು ಆನ್ ಲೈನ್ ಸೌಲಭ್ಯಗಳನ್ನು ಬಳಸಿ ನಕಲು ಮಾಡಲು ಅವಕಾಶ. ಆನ್ ಲೈನ್ ಪರೀಕ್ಷೆಯಲ್ಲೂ ವಂಚನೆಗೆ ಅವಕಾಶ.
- ಕಂಪ್ಯೂಟರ್ ಅಥವಾ ಮೊಬೈಲ್‌ಗಳನ್ನು ನಿರಂತರವಾಗಿ ಗಂಟೆಗಟ್ಟಲೇ ಬಳಸಿದರೆ ಮಕ್ಕಳ ಸೃಜನಾತ್ಮಕತೆ ಕ್ರಮೇಣ ಕ್ಷೀಣಿಸುತ್ತದೆ.
- ತರಗತಿಗಳಲ್ಲಿ ಸ್ನೇಹಿತರ ಸಮೂಹದೊಂದಿಗೆ ಸೇರಿ ಕಲಿಯುವುದಕ್ಕೂ ಏಕಾಂಗಿಯಾಗಿ ಕಲಿಯುವುದಕ್ಕೂ ವ್ಯತ್ಯಾಸವಿದ್ದು, ಮಾನಸಿಕವಾಗಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

### ಉಪಸಂಹಾರ

ಡಿಜಿಟಲ್ ಯುಗದಲ್ಲಿ ಶಿಕ್ಷಣವನ್ನು ಡಿಜಿಟಲೀಕರಣಗೊಳಿಸುವುದು ಅನಿವಾರ್ಯ. ಲಾಕ್ ಡೌನ್ ನಂತಹ ತುರ್ತು ಸಂದರ್ಭದಲ್ಲಿ ಸಮಯದ ಉಳಿತಾಯ ಹಾಗೂ ವಿದ್ಯಾರ್ಥಿಗಳನ್ನು ಕ್ರಿಯಾಶೀಲರಾಗಿರಿಸಲು ಆನ್ಲೈನ್ ಬೋಧನೆ ಮಾಡಬೇಕೇ ಹೊರತು ಇದನ್ನೇ ಮುಖ್ಯ ಬೋಧನಾ ವಿಧಾನವಾಗಿ ನೋಡಬಾರದು. ದೇಶದ ಪ್ರತಿಯೊಂದು ಹಳ್ಳಿಗೂ ಮೊಬೈಲ್ ನೆಟ್ ವರ್ಕ್ ಮತ್ತು ಇಂಟರ್ನೆಟ್ ಸೌಲಭ್ಯ, ಕಂಪ್ಯೂಟರ್/ಲ್ಯಾಪ್ ಟಾಪ್ ಹಾಗೂ ಸೂಕ್ತ ಸಾಫ್ಟ್‌ವೇರ್‌ಗಳು ಪ್ರತಿಯೊಬ್ಬ ವಿದ್ಯಾರ್ಥಿಗೂ ಸಿಗುವಂತಾದಾಗ ಮಾತ್ರ ಆನ್ ಲೈನ್ ಶಿಕ್ಷಣ ಯಶಸ್ವಿಯಾಗಲು ಸಾಧ್ಯ.